**ಕರ್ನಾಟಕ ಸರ್ಕಾರ**
**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ**

**ಮಾದರಿ ಪ್ರಶ್ನೆಪತ್ರಿಕೆ – 1**

**ತರಗತಿ** : ದ್ವಿತೀಯ ಪಿಯುಸಿ | **ಶೈಕ್ಷಣಿಕ ವರ್ಷ** : 2024–25

**ವಿಷಯ**: ಕನ್ನಡ (01) | **ಗರಿಷ್ಠ ಅಂಕಗಳು** : 80

**ಸಮಯ**: 3 ಗಂಟೆಗಳು | **ಒಟ್ಟು ಪ್ರಶ್ನೆಗಳ ಸಂಖ್ಯೆ** : 52

**ಸೂಚನೆ** :
**"ಅ- ವಿಭಾಗ"ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರವೇ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.**

**ಅ- ವಿಭಾಗ**

**(ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.**

**10x1=10**

1) ಯಾರನ್ನು ಕೊಲ್ಲುವುದಿಲ್ಲವೆಂದು ವಿದ್ಯಾದೇವತೆ ಹೇಳಿತು?
    ಅ) ವಿಭೀಷಣ ಮತ್ತು ಕುಂಬಕರ್ಣ    ಆ) ಅಂಗದ ಮತ್ತು ಹನುಮಂತ
    ಇ) ರಾಮ ಮತ್ತು ಲಕ್ಷ್ಮಣ    ಈ) ರಾಮ ಮತ್ತು ಸೀತೆ

2) ಯಾರು ಅನ್ಯಲಿಂಗವನ್ನು ನೆನೆಯುವುದಿಲ್ಲ?
    ಅ) ದೇವಾಲಯದಲ್ಲಿದ್ದವರು    ಆ) ತೀರ್ಥಯಾತ್ರೆಗೆ ಹೋದವರು
    ಇ) ಸಾಮಾನ್ಯ ಭಕ್ತ    ಈ) ಅಂಗದ ಮೇಲೆ ಲಿಂಗ ಧರಿಸಿದವನು

3) "ಹೆಣ್ಣು ಹರಿಬಕ್ಕೋಸುಗವೆ ತ
ಮ್ಮಣ್ಣನಾಜ್ಞೆಯ ಮೀರಿ ಕುಂತಿಯ
ಚಿಣ್ಣ ಬದುಕಿದನೆಂದು ನುಡಿವರು ಕುಜನರಾದವರು – ಈ ಪದ್ಯಭಾಗದಲ್ಲಿ ಬರುವ 'ಕುಂತಿಯ ಚಿಣ್ಣ' ಯಾರು?
    ಅ) ಧರ್ಮರಾಯ    ಆ) ಭೀಮ
    ಇ) ನಕುಲ    ಈ) ಅರ್ಜುನ

4) ಜಾಲಿಯ ರಸಸ್ವಾದ ಹೀಗಿರುತ್ತದೆ
    ಅ) ಒಗರಾಗಿರುತ್ತದೆ    ಆ) ಸಿಹಿಯಾಗಿರುತ್ತದೆ
    ಇ) ವಿಷದಂತಿರುತ್ತದೆ    ಈ) ಹಿತವಾಗಿರುತ್ತದೆ

5) ಯಾವುದು ಚಿಂತನದಿ ಮುಳುಗಿರಲಿ ಎಂದು ಕವಿ ಆಶಿಸುತ್ತಾನೆ?
    ಅ) ಬಾಲ್ಯ    ಆ) ಯವ್ವನ
    ಇ) ಮುಪ್ಪು    ಈ) ಜೀವನ

6) ಮೂಲೆಮನೆ ಮುದ್ದೇಗೌಡರಿಗೂ ಮೂತ್ರಪಿಂಡದ ಕಲ್ಲಾಗಿತ್ತು ಎಂದು ತಿಳಿದಾಗ, ಅವರ ಮನೆಗೂ ಹೋದೆ. 'ಓಹ್ ಈಗದೇನೂ ದೊಡ್ಡ ಆಪರೇಷನ್ ಅಲ್ಲಮ್ಮ, ನಾನು ನಾಲ್ಕು ಬಾರಿ ಮಾಡಿಸಿಕೊಂಡಿದ್ದೇನೆ' ಎಂದು ಅಂಗಿ ಎತ್ತಿ ತೋರಿಸಿದರು. – ಈ ಸಾಲುಗಳಲ್ಲಿ ಮುದ್ದೇಗೌಡರಿಗೆ ಮೂತ್ರಪಿಂಡದ ಕಲ್ಲಿನ ನಿರ್ವಹಣೆ ಬಗ್ಗೆ ಇರುವ ಅಭಿಪ್ರಾಯವೇನು?
    ಅ) ಜಾಗರೂಕತೆ    ಆ) ಭಯ
    ಇ) ಸಂಶಯ    ಈ) ಅಜಾಗರೂಕತೆ

7) ಯಾವ ಕತೆ ಹೇಳಬೇಕೆಂದು ಮನೋರಮೆ ಕೇಳಿದಳು?
    ಅ) ಸೀತಾಸ್ವಯಂವರ    ಆ) ಸೀತಾಪಹರಣ
    ಇ) ರಾಮಾಶ್ವಮೇಧ    ಈ) ಸೀತಾಪರಿತ್ಯಾಗ

8) ನಾಗರಾಜ ಕೋವಿ ಹಿಡಿದು ಎಲ್ಲಿ ಕುಳಿತಿದ್ದ?

ಅ) ಶಿಕಾರಿ ಬಂಡಿ  ಆ) ಶಿಕಾರಿ ಗುಂಡಿ

ಇ) ಶಿಕಾರಿ ಮಂಡಿ  ಈ) ಶಿಕಾರಿ ಗಂಡಿ.

9) ಹಳೇಕೊಪ್ಪದ ಸುಬ್ಬಣ್ಣನಿಗೆ ಆನೆಯಿಂದಾದ ತೊಂದರೆ

ಅ) ಮರ ಉರುಳಿಸಿದ್ದು  ಆ) ಕೊಟ್ಟಿಗೆ ಉರುಳಿಸಿದ್ದು

ಇ) ಮನೆ ಉರುಳಿಸಿದ್ದು  ಈ) ಮೇಕೆ ಉರುಳಿಸಿದ್ದು

10) " ಏನ್ ಸ್ವಾಮಿ, ಸಾಯೋದಕ್ಕೆ ಹೆದರೋವ ನಾನು ಅಂತ ತಿಳುಕೊಂಡ್ರಿ? ಲೈನ್ ಮನ್ ಕೆಲಸಕ್ಕೆ ಸೇರಿದ ಮೇಲೆ ಪ್ರಾಣದ ಆಸೆ ಇಟ್ಕೊಂಡ್ರೆ ಆಗುತ್ತ? ನಮ್ಮ ಡಿಪಾರ್ಟ್ ಮೆಂಟಿನ ಲೈನ್ ಮನ್ ಗಳ್ಯಾರಾದ್ರೂ ಈವರೆಗೆ ಸರ್ವಿಸ್ ಮುಗಿಸಿ ರಿಟೈರಾಗಿರೋದನ್ನ ನೋಡಿದ್ದೀರಾ?" ಲೈನ್ ಮನ್ ದುರ್ಗಪ್ಪನ ಮಾತುಗಳು ಆತನ ಕೆಲಸದ ಬಗ್ಗೆ ಏನನ್ನು ಸೂಚಿಸುತ್ತದೆ.

ಅ) ಸುಲಭದ ಕೆಲಸ  ಆ) ಕಷ್ಟಕರವಾದ ಕೆಲಸ

ಇ) ಕಿಡಿಗೇಡಿತನದ ಕೆಲಸ  ಈ) ಅಪಾಯಕಾರಿ ಕೆಲಸ

**(ಆ) ಬಿಟ್ಟ ಸ್ಥಳಗಳಿಗೆ ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ.** **5x1=05**

(ಕನ್ನಡಿಗರು, ಪುದುತೋಟಂ, ಅಣ್ಣಾಮಲೈ, ಪೆನ್ ಶನ್ ದಾರರಿಗೆ, ಶಿವಸುಬ್ರಮಣ್ಯ ಅಯ್ಯರ್, ಕುದುಪನಿಗೆ,)

11) ವಾಲ್ ಪರೈ ಮಧ್ಯದಲ್ಲಿ ____________________ ತೋಟವಿದೆ.

12) ತಮ್ಮ ರಾಜ್ಯದಲ್ಲಿ ತಾವೇ ತಬ್ಬಲಿಗಳಾಗುತ್ತಿರುವವರು ________________________

13) ಧಣಿಗಳು ಹೊಳೆಯ ಹೊಳೆತ್ತಲು _______________________ಸೂಚಿಸಿದರು.

14) ಕಲಾಂ ಅವರು ______________________ ವಿಶ್ವವಿದ್ಯಾನಿಲಯದಲ್ಲಿ ಸಂದರ್ಶಕ ಪ್ರೊಫೆಸರ್ ಆಗಿದ್ದರು.

15) ಬಾಯಿ ಚಪಲ ______________________ ಜಾಸ್ತಿ ಇರುತ್ತದೆ.

**(ಇ) ಹೊಂದಿಸಿ ಬರೆಯಿರಿ** **5x1=05**

16.

| | |
|---|---|
| ಅ) ಕೀರ್ತನೆ | 1) ತೆರೆದ ದಾರಿ |
| ಆ) ಮುಂಬೈ ಜಾತಕ | 2) ಒಮ್ಮೆ ನಗುತ್ತೇವೆ |
| ಇ) ಕೆ.ಎಸ್. ನಿಸಾರ್ ಅಹಮದ್ | 3) ಟಿ.ಯಲ್ಲಪ್ಪ |
| ಈ) ಹತ್ತಿ_ಚಿತ್ತ...ಮತ್ತು_ | 4) ಜಾಲಿಯ ಮರ |
| ಉ) ನಾನೆಂಬ ಮಾಯೆ | 5) ಶಿಲುಬೆ ಏರಿದ್ದಾನೆ |
| | 6) ದ.ರಾ.ಬೇಂದ್ರೆ |

**ಆ – ವಿಭಾಗ**

**(ಅ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ. 3x2=06**

17. ರಾವಣನಿಗೆ ಸೀತೆಯ ಬಗ್ಗೆ ವೈರಾಗ್ಯ ಮೂಡಿದ ಸಂದರ್ಭವನ್ನು ವಿವರಿಸಿ.

18. ಕೊಲಲಕ್ಷಮರೆಂದು ದ್ರೌಪದಿ ಯಾರನ್ನು ಕುರಿತು ಹೇಳಿದ್ದಾಳೆ?

19. ಬೆಳಕು – ಬೇಟೆಗಾರ ಹೇಗೆ ಬರುತ್ತಾನೆ?

20. ಶಿಲುಬೆಗೇರಿದ ಯೇಸುವಿನ ದೇಹ ಯಾರಿಗೆ, ಏನನ್ನು ಅನ್ನುವಂತಿದೆ?

**(ಆ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ. 2x2=04**

21. ಅನ್ಯ ಡಾಕ್ಟರುಗಳು ಬಸಲಿಂಗನ ಕಾಯಿಲೆ ಬಗ್ಗೆ ಏನೆಂದು ಪ್ರತಿಕ್ರಿಯಿಸಿದರು?

22. ತ್ರಿಭಾಷಾ ಸೂತ್ರದ ಬಳಕೆ ಹೇಗಿರಬೇಕು?

23. ಕಲಾಂ ಅವರು ಬಂಡೆಗಳ ಬಸಿರಲ್ಲಿ ಕಂಡದ್ದೇನು ?

24. ಪಟ್ಟಣದ ಹೊಟೇಲಿನ ಕಟ್ಟಡ ಹೇಗಿದೆ?

**(ಇ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ. 3x2=06**

25. ದುರ್ಗಪ್ಪ ಏಕೆ ಬಂದಿರಬಹುದೆಂದು ನಿರೂಪಕರು ಯೋಚಿಸಿದರು?
26. ಕಾಡಾನೆಗಳ ಹಾವಳಿಗೆ ಪ್ರಕಾಶ್ ನೀಡಿದ ಕಾರಣಗಳೇನು?
27. ನಾಗರಾಜ ದುರ್ಗಪ್ಪನ ಮೇಲೆ ಏನೆಂದು ರೇಗಿದನು?
28. ಜಬ್ಬಾರ ನಿರೂಪಕರಿಗೆ ಅಂಚೆ ವಿಲೇವಾರಿ ಬಗ್ಗೆ ಅಸಡ್ಡೆಯಿಂದ ಏನು ಹೇಳಿದ ?

## ಇ – ವಿಭಾಗ

**(ಅ) ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. 2x3=06**

29. ಜ್ಯೋತಿ ನಿನ್ನ್ಯಾರ ಹೋಲರ
30. ಕುಳಿತು ಕೆಮ್ಮುವ ಪ್ರಾಣಿ
31. ಅಲ್ಲಿಯ ಮಾತು ಅವನಿಗೆ ಸಸೇಮಿರ ಬರದು

**(ಆ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. 1x3=03**

32. ಹಾಡುವುದು ಅವುಗಳಿಗೆ ಅನಿವಾರ್ಯ, ಅವುಗಳ ಕರ್ಮ
33. "ಈ ಅದೃಷ್ಟ ನಿನಗೂ ಇತ್ತಲ್ಲೇ?"
34. ನೀರಿಳಿಯ ಗಂಟಲೊಳ್ ಕಡುಬಂ ತುರುಕಿದಂತಾಯ್ತು

**(ಇ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. 1x3=03**

35. ಹೊರಗಡೆಯಿಂದ ಎಕ್ಸ್ ಪೋರ್ಟ್ ಆದವು
36. ಈ ಕಂಬದೊಳ್ಗೆ ಏನೋ ಸೇರ್ಕೊಂಡಿದೆ

## ಈ – ವಿಭಾಗ

**(ಅ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 2x4=08**

37. 'ಕದಡಿದ ಸಲಿಲಂ ತಿಳಿವಂದದೆ' ಕಾವ್ಯಭಾಗದಲ್ಲಿ ಕಂಡುಬರುವ ರಾವಣನ ವ್ಯಕ್ತಿತ್ವವನ್ನು ವಿಮರ್ಶಿಸಿ.
38. ರಕ್ಷಿಸಬೇಕಾದವರೇ ಭಕ್ಷಕರಾದರೆ ಒದಗುವ ವಿಘಟನೆಯನ್ನು ಬಸವಣ್ಣನವರು ಹೇಗೆ ಚಿತ್ರಿಸಿದ್ದಾರೆ?
39. ದ್ರೌಪದಿ ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿ?
40. ಈ ಕೆಳಗಿನ ಪದ್ಯಭಾಗವನ್ನು ಅರ್ಥೈಯಿಸಿಕೊಂಡು ಕೇಳಿರುವ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ.

> ಉಣದಿರ್ಪಾ ಧನಮಿರ್ದೊಡೇನು ಸುತನಿರ್ದೇಂ ಮುಪ್ಪಿನಲ್ಲಾಗದಾ
> ಒಣಗಲ್ಪೈರಿಗೆ ಬಾರದಿರ್ದ ಮಳೆ ತಾಂ ಬಂದೇನಾಪತ್ತಿನೊಳ್
> ಮಣಿದುಂ ನೋಡದ ಬಂಧುವೇತಕೆಣಿಸಲ್ ಕಾಲೋಚಿತಕ್ಕೈದಿದಾ
> ತೃಣವೇ ಪರ್ವತವಲ್ಲವೇ ಹರಹರಾ ಶ್ರೀಚೆನ್ನಸೋಮೇಶ್ವರಾ

ಅ) ಬೆಳೆಗೆ ಮಳೆ ಯಾವಾಗ ಬೇಕು? (1 ಅಂಕ)

ಆ) ಈ ಪದ್ಯದ ಕವಿಯ ಅಂಕಿತ ಯಾವುದು? (1 ಅಂಕ)

ಇ) ಸಮಯೋಚಿತಕ್ಕಾದ ಹುಲ್ಲುಕಡ್ಡಿಯು ಕೂಡ ಪರ್ವತಕ್ಕೆ ಸಮಾನ ಎಂಬ ಹೇಳಿಕೆಯನ್ನು ಸಮರ್ಥಿಸಿ. (2 ಅಂಕ)

**(ಆ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 1x4=04**

41. ಬಸಲಿಂಗ ಕೊನೆಯಲ್ಲಿ ತೆಗೆದುಕೊಂಡ ನಿರ್ಧಾರ ಯಾವುದು? ಅದಕ್ಕೆ ಕಾರಣಗಳೇನು?
42. ಚಿನ್ನಮ್ಮನ ಕುಟುಂಬ ಹೊಳೆಯ ಬಗ್ಗೆ ಅಸಹನೆ ಹೊಂದಬಾರದೆಂದು ಲೇಖಕಿ ಬಯಸುವುದೇಕೆ ವಿವರಿಸಿ?

**(ಇ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 1x4=04**

43. ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣನ ಸಾವಿಗೆ ಕೃಷ್ಣೇಗೌಡರ ಆನೆ ಕಾರಣವೇ ವಿವರಿಸಿ?
44. ತನ್ನ ಆನೆಯ ಬಗ್ಗೆ ಕೃಷ್ಣೇಗೌಡನಲ್ಲಿ ಬೇಸರ ಮೂಡಲು ಕಾರಣಗಳೇನು?

## ಉ – ವಿಭಾಗ

### (ಭಾಷಾಭ್ಯಾಸ)

**(ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ.**

**4x2=08**

45. ಕೆಳಗಿನ ಎರಡು ಶಬ್ದಗಳಿಗೆ ತದ್ಭವ ರೂಪ ಬರೆಯಿರಿ.

ವೀರ, ಆಕಾಶ, ಮುಖ

46. ಕೆಳಗಿನ ಎರಡು ಪದಗಳ ಗುಣವಾಚಕಗಳನ್ನು ಗುರುತಿಸಿ, ಬರೆಯಿರಿ.

ಹಾಸುಗಂಬಿ, ಶುದ್ಧನೀರು, ದೂರದೃಷ್ಟಿ

47. ಕೆಳಗಿನ ಎರಡು ಪದಗಳ ವಿಭಕ್ತಿಗಳನ್ನು ಹೆಸರಿಸಿ.

ಗುರುವಿಗೆ, ತಿಮ್ಮಪ್ಪನವರಲ್ಲಿ, ಕಟ್ಟಿಗೆಯ

48. ಕೆಳಗಿನ ಎರಡು ಕ್ರಿಯಾಪದಗಳ ಕಾಲವನ್ನು ಬರೆಯಿರಿ.

ಹೋದವು, ಓದಿದಳು, ನಲಿಯುತ್ತಾರೆ

49. ಕೆಳಗಿನ ಎರಡು ನುಡಿಗಟ್ಟುಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ.

ಕೈಯೊಡ್ಡು, ರೈಲುಬಿಡು, ರಾಮಬಾಣ

50. ಯಾವುದಾದರೂ ಎರಡು ಅನ್ಯದೇಶ್ಯ ಪದಗಳನ್ನು ಬರೆಯಿರಿ.

**(ಆ) ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧವನ್ನು ಬರೆಯಿರಿ.** **1x4=04**

51. ವಿದ್ಯಾರ್ಥಿ ಜೀವನದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳ ಮಹತ್ವ

**ಅಥವಾ**

ಪ್ಯಾರಿಸ್ ಒಲಿಂಪಿಕ್ಸ್ ನಲ್ಲಿ ಭಾರತೀಯ ಕ್ರೀಡಾಪಟುಗಳ ಸಾಧನೆ.

**(ಇ) ಯಾವುದಾದರೂ ಒಂದು ವಿಷಯವನ್ನು ಕುರಿತು ಪತ್ರ ಬರೆಯಿರಿ.** **1x4=04**

52. ಮೋಹನ/ಸುನಂದಾ, ದ್ವಿತೀಯ ಪಿಯುಸಿ, ಮದರ್ ತೆರೇಸಾ ಪದವಿ ಪೂರ್ವ ಕಾಲೇಜು, ಜಗಳೂರು, ದಾವಣಗೆರೆ ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ ರಾಜಶೇಖರ, ಕಾರಂತ ರಸ್ತೆ, ಲಕ್ಷ್ಮೀಪುರ, ಬ್ರಹ್ಮಾವರ ತಾಲ್ಲೂಕು, ಉಡುಪಿ ಜಿಲ್ಲೆ ಈ ವಿಳಾಸದಲ್ಲಿ ವಾಸವಿರುವ ನಿಮ್ಮ ತಂದೆಗೆ ಪ್ರವಾಸಕ್ಕೆ ಹೋಗಲು ಹಣ ಮತ್ತು ಅನುಮತಿಯನ್ನು ಕೋರಿ ಪತ್ರ ಬರೆಯಿರಿ.

**ಅಥವಾ**

ಗಂಗಾ/ಭೀಮೇಶ, ದ್ವಿತೀಯ ಪಿಯುಸಿ, ಅಬ್ದುಲ್ ಕಲಾಂ ಪಿಯು ಕಾಲೇಜು, ಆಳಂದ, ಕಲಬುರಗಿ ಜಿಲ್ಲೆ ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ ನಿಮ್ಮ ಕಾಲೇಜಿನ ಪ್ರಾಂಶುಪಾಲರಿಗೆ ಅಂಕಪಟ್ಟಿ ಮತ್ತು ವರ್ಗಾವಣೆ ಪತ್ರ ಕೋರಿ ಪತ್ರ ಬರೆಯಿರಿ.